# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ 21/2019

ಸಿ.ಡಬ್ಲ್ಯೂಃ 01 ಪಿಡಬ್ಲ್ಯೂಃ 04

ಸಾಕ್ಷಿದಾರರ ಹೆಸರುಃ ಮಾಲತೇಶ ಮುದ್ದಿ ತಂದೆಃಶಿವಪ್ಪ
ವಯಸ್ಸುಃ 49 ವರ್ಷ
ಉದ್ಯೋಗಃ ಮುಖ್ಯಪೇದೆ ಇಟಗಿ ಪೊಲೀಸ್ ಠಾಣೆ.
ಸಾಕೀನಃ ಇಟಗಿ

ದಿಃ 23-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು 2017 ರಿಂದ 2021 ರವರೆಗೆ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡಿರುತ್ತೇನೆ.

02. ದಿ.27-08-2017 ರಂದು ಸಂಜೆ.05.00 ಗಂಟೆ ಸುಮಾರಿಗೆ ಹಿರೇಹಡಗಲಿ ಠಾಣಾ ವ್ಯಾಪ್ತಿಯಲ್ಲಿ ಗಣಪತಿ ಮೂರ್ತಿ ವಿಸರ್ಜನಾ ಪ್ರಯುಕ್ತ ಹಗರನೂರು ಕೆರೆಯ ಹತ್ತಿರ ಬಂದೂಬಸ್ತ ಕರ್ತವ್ಯದಲ್ಲಿದ್ದಾಗ ಚಾ.ಸಾ.11 ರವರಿಗೆ ಮಾನ್ಯರ ಮಸಲವಾಡ ಗ್ರಾಮದಲ್ಲಿ ಮಧ್ಯ ಮಾರಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದಿರುತ್ತದೆ. ಆಗ ಚಾ.ಸಾ.11 ರವರು ಜೀಪಿನಲ್ಲಿದ್ದ ನನಗೆ ಮತ್ತು ಚಾ.ಸಾ.02 ರಿಂದ 05 ರವರಿಗೆ ಅವರಿಗೆ ಬಂದ ಬಾತ್ಮಿಯನ್ನು ತಿಳಿಸಿ ದಾಳಿಗೆ ಹೋಗಲು ತಿಳಿಸಿರುತ್ತಾರೆ. ಅದರಂತೆ ನಾವುಗಳು ಸಂಜೆ.05.00 ಗಂಟೆಗೆ ಸದರಿ ಬಾತ್ಮಿ ಸ್ಥಳದಿಂದ ಹೊರಟು 05.30 ಗಂಟೆಗೆ ಮಾನ್ಯರ ಮಸಲವಾಡ ಗ್ರಾಮಕ್ಕೆ ಹೋಗಿರುತ್ತೇವೆ. ಸದರಿ ಗ್ರಾಮದಲ್ಲಿ ಚಾ.ಸಾ.04 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ಚಾ.ಸಾ.11 ರವರು ತಿಳಿಸಿರುತ್ತಾರೆ. ಅದರಂತೆ ಚಾ.ಸಾ.04 ರವರು ಚಾಸಾ.06 ಮತ್ತು 07 ರವರನ್ನು ಕರೆದುಕೊಂಡು ಬಂದು ಚಾ.ಸಾ.11 ರವರ ಮುಂದೆ ಹಾಜರುಪಡಿಸಿರುತ್ತಾರೆ. ಆಗ ಚಾ.ಸಾ.11 ರವರು ತಮಗೆ ಬಂದ ಬಾತ್ಮಿ ವಿಷಯವನ್ನು ಪಂಚರಿಗೂ ಸಹ ತಿಳಿಸಿ, ಅವರಿಗೆ ಪಂಚನಾಮೆಗೆ ಸಹಕರಿಸಲು ಕೋರಿಕೊಂಡಿದ್ದರಿಂದ ಪಂಚರು ಅದಕ್ಕೆ ಒಪ್ಪಿದ್ದರಿಂದ ಪಂಚರೊಂದಿಗೆ ನಾವುಗಳು ಸದರಿ ಗ್ರಾಮದ ವಡ್ಡರ ಓಣಿಯಲ್ಲಿರುವ ಟ್ಯಾಂಕ ಹತ್ತಿರ ಹೋಗಿ ಜೀಪನ್ನು ಮರೆಮಾಚಿ ನಿಲ್ಲಿಸಿ ನೋಡಲಾಗಿ ಇಬ್ಬರು ವ್ಯಕ್ತಿಗಳು ಒಂದು ಚೀಲದಲ್ಲಿ ಮಧ್ಯವನ್ನು ಮಾರಾಟ ಮಾಡುತ್ತಿರುವುದನ್ನು ಗಮನಿಸಿ ಅವರ ಮೇಲೆ ದಾಳಿ ಮಾಡಲು ಹೋಗುತ್ತಿದ್ದಂತೆ ಸದರಿ ವ್ಯಕ್ತಿಗಳು ಪರಾರಿಯಾಗಿರುತ್ತಾರೆ. ಅವರನ್ನು ಹಿಡಿಯಲು ಪ್ರಯತ್ನಿಸಲಾಗಿ ಅವರು ಸಿಗಲಿಲ್ಲ.

ಆಗ ಸದರಿ ವ್ಯಕ್ತಿಗಳು ಬಿಟ್ಟು ಹೋಗಿದ್ದ ಪ್ಲಾಸ್ಟಿಕ ಚೀಲವನ್ನು ಪರಿಶೀಲಿಸಿ ನೋಡಲಾಗಿ **180** ಎಮ್. ಎಲ್.ನ ರಾಜಾ ವಿಸ್ಕೀಯ **20** ಬಾಟಲಗಳು ಮತ್ತು **90** ಎಮ್.ಎಲ್.ನ ಬೆಂಗಳೂರು ಮಾಲ್ಟ್ ವಿಸ್ಕೀಯ **18** ಟೆಟ್ರಾಪ್ಯಾಕಗಳು ಇದ್ದವು. ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡು ಮದ್ಯದ ಬಾಟಲ ಮತ್ತು ಪೌಚಗಳನ್ನು ತಲಾ ಒಂದರಂತೆ ಪ್ರತ್ಯೇಕವಾಗಿ ತೆಗೆದು **SHO** ಅಂತ ಸೀಲು ಮಾಡಿ ಮತ್ತು ಸ್ಥಳದಲ್ಲಿ ದೊರೆತಿದ್ದ **250/-** ನಗದು ಹಣವನ್ನು ಚಾ.ಸಾ.**11** ರವರು ಪಂಚನಾಮೆ ಮೂಲಕ ಸಂಜೆ.**06.00** ರಿಂದ **07.00** ಗಂಟೆಯವರೆಗೆ ಅಮಾನತ್ತು ಪಡೆಸಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿದ್ದ ಸಾರ್ವಜನಿಕರನ್ನು ಓಡಿ ಹೋದ ವ್ಯಕ್ತಿಗಳ ಬಗ್ಗೆ ವಿಚಾರಿಸಲಾಗಿ ಸುಭಾಶ ಮತ್ತು ನಿಂಗಪ್ಪ ಎಂದು ತಿಳಿಸಿರುತ್ತಾರೆ. ಸದರಿ ಸ್ಥಳದಲ್ಲಿ ದೊರೆತ ಮದ್ಯದ ಮಾಲುಗಳು ಮತ್ತು ಹಣವನ್ನು ತೆಗೆದುಕೊಂಡು ಪಂಚನಾಮೆಯೊಂದಿಗೆ ಠಾಣೆಗೆ ವಾಪಸ್ಸು ಬಂದು ಚಾ.ಸಾ.**11** ರವರು ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ. ಓಡಿ ಹೋದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಈ ದಿನ ನ್ಯಾಯಾಲಯದ ಮುಂದೆ **02** ನೇ ಆರೋಪಿ ಹಾಜರಿದ್ದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. **01** ನೇ ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಗೈರು ಹಾಜರಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆತನನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.**01** ಮತ್ತು **2** ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ. ಕೆ.ಕೆ. ವಕೀಲರವರಿಂದಃ</u>

**03.** ನಾವು ದಾಳಿಗಾಗಿ **05** ಜನ ಹೋಗಿರುತ್ತೇವೆ. ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಸಮಯ ಗಸ್ತು ಮಾಡಿರುತ್ತೇವೆ ಎಂದರೆ ಟೈಮಿಂಗ್ಸ ಇರುವುದಿಲ್ಲ ನಾವು ಬೆಳಗ್ಗಿನಿಂದ ಗಸ್ತು ಕೆಲಸ ಮಾಡಿರುತ್ತೇವೆ. ನಾವು ಗಸ್ತು ಮಾಡಿರುವ ಮಾತು ಸುಳ್ಳು ಎಂದರೆ ಸರಿಯಲ್ಲ. ತೇರು ಬಿದಿಯ ಪೂರ್ವಕ್ಕೆ ನಮ್ಮ ವಾಹನವನ್ನು ನಿಲ್ಲಿಸಿರುತ್ತೇವೆ. ತೇರು ಬಿದಿಯಿಂದ **200-250** ಮೀಟರ ದೂರದಲ್ಲಿ ವಾಹನವನ್ನು ನಿಲ್ಲಿಸಿರುತ್ತೇವೆ. ತೇರು ಬಿದಿಯಿಂದ **200** ಮೀಟರ ದೂರದಲ್ಲಿ **Over head tank** ಇರುತ್ತದೆ. ಆ ದಿನ ಸಾರ್ವಜನಿಕರು ಎಷ್ಟು ಜನ ಮತ್ತು ಯಾರು ಇದ್ದರು ಎಂದು ಹೇಳಲು ಆಗುವುದಿಲ್ಲ. ಆರೋಪಿತನ ಹೆಸರನ್ನು ಯಾರು ಸಾರ್ವಜನಿಕರು ಹೇಳಿದರು ಎಂದು ಹೇಳಲು ಆಗುವುದಿಲ್ಲ.

**04.** ದಾಳಿಗೆ ಹೋದ ದಿನ ಮೊಬೈಲ ಫೋನ ಅಥವಾ ಕ್ಯಾಮರಾಗಳಿಂದ ದಾಳಿ ಮಾಡುವಾಗ ಫೊಟೋಗಳನ್ನು ತೆಗೆದಿರುವುದಿಲ್ಲ. ಜಪ್ತು ಪಡೆಸಿಕೊಂಡ **250/-**

ರೂಪಾಯಿಯ ಯಾವ ಮುಖಬೆಲೆಯ ನೋಟುಗಳು ಎಂದು ಹೇಳಲು ಆಗುವುದಿಲ್ಲ. **250/-** ರೂಪಾಯಿಯಲ್ಲಿ ಒಟ್ಟು ಎಷ್ಟು ನೋಟುಗಳು ಇದ್ದವು ಎಂದು ಹೇಳಲು ನನಗೆ ನೆನಪು ಇರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ **2** ನೇ ಆರೋಪಿತನಿಗೆ ಪೋಲಿಯೋ ಆಗಿದ್ದು ಆತನಿಗೆ ವಾಕರ ಸಹಾಯ ಇಲ್ಲದೆ ನಡೆಯಲು ಆಗುವುದಿಲ್ಲ ಹೀಗಾಗಿ ಅವನು ಓಡಿ ಹೋಗಲು ಸಾಧ್ಯವಿಲ್ಲ ಎಂದರೆ **1** ಮತ್ತು **2** ನೇ ಆರೋಪಿತರು ಆ ದಿನ ಓಡಿ ಹೋಗಿರುತ್ತಾರೆ. ನಾವು ದಾಳಿ ಮಾಡಿದ ದಿನ **1** ಮತ್ತು **2** ನೇ ಆರೋಪಿತರು ಓಡಿ ಹೋಗಿರುತ್ತಾರೆ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. **1** ಮತ್ತು **2** ನೇ ಆರೋಪಿತರು ನಾವು ದಾಳಿ ಮಾಡಿದ ದಿನ ಸ್ಥಳದಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ.

**05.** ಒಬ್ಬ ಪಂಚರು ಒಟ್ಟು **2** ಸಹಿಗಳನ್ನು ಮಾಡಿರುತ್ತಾರೆ. ಮುದ್ದೆಮಾಲುಗಳಂತಹ ಮಧ್ಯದ ಬಾಟಲಿ ಮತ್ತು ಪೌಚಗಳು ಹೊರಗಡೆ ಮಧ್ಯದ ಅಂಗಡಿಯಲ್ಲಿ ಮಾರಾಟ ಮಾಡಲು ಸಿಗುತ್ತವೆ ಎಂದರೆ ಸರಿ. ಆ ದಿನ ನಾನು ಮತ್ತು ನಮ್ಮ ಸಿಬ್ಬಂದಿಗಳು ಮಸಲವಾಡಕ್ಕೆ ದಾಳಿ ಮಾಡಲು ಹೋಗಿರುವುದಿಲ್ಲ, ಆರೋಪಿತರು ಅಲ್ಲಿ ಇರಲಿಲ್ಲ ಮತ್ತು ಅವರು ಓಡಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಯಾವುದೇ ಮಾಲನ್ನು ಜಪ್ತುಪಡೆಸಿಕೊಂಡಿರುವುದಿಲ್ಲ, ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಪಂಚರ ಸಹಿಯನ್ನು ಸಹ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇರುವುದಿಲ್ಲ .

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ, "ನನ್ನ ಸಮಕ್ಷಮ"

**Sd/-**
(ಶ್ರೀಮತಿ. ಅಕ್ಷತಾ.ಟಿ )
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.